## ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/479/2016/ಎಆರ್ಇ-8

ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ:30.09.2022

### :: ವಿಚಾರಣಾ ವರದಿ ::

**ಉಪಸ್ಥಿತರು:** **ರಾಜಶೇಖರ.ವಿ.ಪಾಟೀಲ**
ಅಪರ ನಿಬಂಧಕರು ವಿಚಾರಣೆಗಳು-8,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಶ್ರೀ.ನಾಗರಾಜ, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ/. ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1.ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ /2096/2015/ಎಆರ್ಇ-4 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 17.08.2016.

2.ಸರ್ಕಾರದ ಆದೇಶ ಸಂಖ್ಯೆ:ಲೋಇ 258 ಸೇಇವಿ 2016 ಬೆಂಗಳೂರು, ದಿನಾಂಕ:05.10.2016

3.ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/479/2016/ ಎಆರ್ಇ-8, ಬೆಂಗಳೂರು, ದಿನಾಂಕ:17.10.2016

*****

1. ಪ್ರಸ್ತುತ ದೂರನ್ನು ದೂರುದಾರರಾದ ಶ್ರೀ.ನಿರುಪಾದೆಪ್ಪ ತಂದೆ ಅಳದಪ್ಪ, ಬೊಮ್ಮನಾಳ ಇ.ಜೆ ಗ್ರಾಮ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ ರವರು ಆಸನೌ ಶ್ರೀ.ಜಿ.ನಾಗರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಹೊಸಪೇಟೆ, ಬಳ್ಳಾರಿ ಜಿಲ್ಲೆ) ಇವರ ವಿರುದ್ಧ ಸಲ್ಲಿಸಿರುತ್ತಾರೆ.

Reeee 30/9/...

2. ದೂರುದಾರರು ಶ್ರೀ.ನಿರುಪಾದೆಪ್ಪ ತಂದೆ ಅಳದಪ್ಪ, ಬೊಮ್ಮನಾಳ ಇ.ಜೆ ಗ್ರಾಮ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರು ರಯಚುರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ.ನಾಗರಾಜ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಹೊಸಪೇಟೆ, ಬಳ್ಳಾರಿ ಜಿಲ್ಲೆ) ರವರು ಸಿಂಧನೂರಿನಿಂದ ಬಪ್ಪೂರ ವರೆಗೆ 0.00ಕಿಮೀ ನಿಂದ 8.00ಕಿ.ಮೀ ವರೆಗೆ ಮತ್ತು 8.00ಕಿಮೀ ನಿಂದ 20.00 ಕಿಮೀ ವರೆಗಿನ ರಸ್ತೆಯನ್ನು 5054 ORF Appendix E New Works 2011-12 ನೇ ಸಾಲಿನಲ್ಲಿ ಮಾಡಿದ್ದು, ಕಳಪೆ ಕಾಮಗಾರಿ ಮಾಡಿ ಕರ್ತವ್ಯ ಲೋಪವೆಸಗಿರುವ ಬಗ್ಗೆ ಆರೋಪ ಮಾಡಿದ್ದಾರೆ.

3. ಸದರಿ ದೂರುದಾರರ ದೂರು ಅರ್ಜಿ ಆಧಾರದಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆ ತನಿಖೆ ಮಾಡಿ ತನಿಖೆ ಪೂರ್ಣಗೊಂಡ ನಂತರ ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ12(3) ರಡಿಯಲ್ಲಿ ಉಲ್ಲೇಖ(1) ರಲ್ಲಿ ಕಾಣಿಸಿದಂತೆ ದಿನಾಂಕ 17.08.2016 ರಂದು ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ(2) ರಲ್ಲಿ ದಿ:05.10.2016 ರಂದು ಉಲ್ಲೇಖಿಸಿದ್ದಾರೆ. ಅದರ ಆಧಾರದಲ್ಲಿ ಮಾನ್ಯ ಲೋಕಾಯುಕ್ತ ರವರು ದಿನಾಂಕ: 17.10.2016 ರಂದು ಅಪರ ನಿಬಂಧಕರು (ವಿಚಾರಣೆಗಳು)-8 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

4. ನಾಮನಿರ್ದೇಶನದಂತೆ ಆಪಾದಿತ ಸರ್ಕಾರಿ ನೌಕರ ಶ್ರೀ.ಜಿ.ನಾಗರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಹೊಸಪೇಟೆ, ಬಳ್ಳಾರಿ ಜಿಲ್ಲೆ) ಇವರ ವಿರುದ್ಧ ಅಪರ ನಿಬಂಧಕರು (ವಿಚಾರಣೆಗಳು)-8 ರವರು ದೋಷಾರೋಪಣಾ ಪಟ್ಟಿಯನ್ನು ರಚಿಸಿದ್ದು, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 21/11/2016 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

30/9/

*ಅನುಬಂಧ-1*

***ದೋಷಾರೋಪಣೆ-1***

5. ಶ್ರೀ.ಜಿ.ನಾಗರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಸಿಂಧನೂರು – ಆಪಾದಿತ ಸರ್ಕಾರಿ ನೌಕರರು ಆದ ನೀವು ಸಿಂಧನೂರು ಲೋಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸಿಂಧನೂರಿನಿಂದ ಬಪ್ಪೂರವರೆಗೆ 0.00 ಕಿ.ಮೀ. ನಿಂದ 8.00 ಕಿ.ಮೀ.ವರೆಗೆ ಮತ್ತು 8.00 ಕಿ.ಮಿ ನಿಂದ 20.00 ಕಿ.ಮಿ.ವರೆಗಿನ ರಸ್ತೆಯನ್ನು 5054 ORF Appendix E New Works 2011–12ನೇ ಸಾಲಿನಲ್ಲಿ ಮಾಡಿದ್ದು, ಕಳಪೆ ಕಾಮಗಾರಿ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ. ಆದಕಾರಣ ಸರ್ಕಾರಿ ಆಪಾದಿತ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ನೀವು ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966ರ (3)(1)(ii) ಮತ್ತು (iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

*ಅನುಬಂಧ-2*

**ದೋಷಾರೋಪಣೆಯ ವಿವರ**

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

6. ಶ್ರೀ.ನಿರುಪಾದೆಪ್ಪ ತಂದೆ ಅಳದಪ್ಪ, ಬೊಮ್ಮನಾಳ ಇ.ಜೆ. ಗ್ರಾಮ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಜಿ.ನಾಗರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ (ಪ್ರಸ್ತುತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಹೊಸಪೇಟೆ, ಬಳ್ಳಾರಿ ಜಿಲ್ಲೆ) ರವರ ವಿರುದ್ಧ ಈ ದೂರನ್ನು ಸಲ್ಲಿಸಿದ್ದು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ.9ರಡಿ ತನಿಖೆಗೆ ಕೈಗೆತ್ತಿಕೊಂಡಿದ್ದಿದೆ.

31/9/

7. ದೂರಿನ ಸಂಕ್ಷಿಪ್ತ ಆಪಾದನೆಗಳು:-

8. ದೂರುದಾರರು ತಮ್ಮ ದೂರಿನೊಂದಿಗೆ Work Estimate Details ಮತ್ತು ಪೋಟೋಗಳನ್ನು ಹಾಜರುಪಡಿಸಿ, ಆಪಾದಿತ ಸರ್ಕಾರಿ ನೌಕರರು ಸಿಂಧನೂರು ಲೋಕೋಪಯೋಗಿ ಉಪವಿಭಾಗ, ಬಂದರು ಮತ್ತು ಒಳಜಲಸಾರಿಗೆ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆಗಿ ಸಿಂಧನೂರಿನಿಂದ ಬಪ್ಪೂರ 0.00 ಕಿ.ಮಿ. ನಿಂದ 8.00 ಕಿ.ಮಿ.ವರೆಗೆ ಮತ್ತು 8.00 ಕಿ.ಮಿ ನಿಂದ 20.00 ಕಿ.ಮಿ.ವರೆಗಿನ ರಸ್ತೆಯನ್ನು 5054 ORF Appendix E New Works 2011-12ನೇ ಸಾಲಿನಲ್ಲಿ ಮಾಡಿದ್ದು, ಕಳಪೆ ಕಾಮಗಾರಿ ಅಸಮಪರ್ಕವಾಗಿದ್ದು, ತನಿಖೆ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

9. ದೂರಿನ ಪ್ರತಿ ಮತ್ತು ಅದಕ್ಕೆ ಲಗತ್ತಾದ ದಾಖಲೆಗಳನ್ನು ಆಪಾದಿತ ಸರ್ಕಾರಿ ನೌಕರರಿಗೆ ಕಳುಹಿಸಿ, ಅವರ ಆಕ್ಷೇಪಣೆ/ತಕರಾರನ್ನು ಪಡೆಯಲಾಗಿದ್ದು, ಸದರಿ ಆಕ್ಷೇಪಣೆಯಲ್ಲಿ ಆಪಾದಿತ ಸರ್ಕಾರಿ ನೌಕರರು ಆಪಾದನೆಗಳನ್ನು ಅಲ್ಲಗಳೆಯುತ್ತಾ, ಕಾಮಗಾರಿಗಳನ್ನು ಗುತ್ತಿಗೆದಾರರ ಮುಖಾಂತರ ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗಿದೆ, ಅಂದಾಜು ಪತ್ರಿಕೆಯಲ್ಲಿ ಕಲ್ಪಿಸಲಾಗಿದ್ದ ರಸ್ತೆ ಕಾಮಗಾರಿಗಳನ್ನು ಅಧೀಕ್ಷಕ ಅಭಿಯಂತರರು ಪರಿವೀಕ್ಷಣೆ ಮಾಡಿ ಬದಲಾವಣೆ ಮಾಡಿ ನಿರ್ವಹಿಸುವಲ್ಲಿ ಯಾವುದೇ ಲೋಪವಾಗಿಲ್ಲ, ಅದಲ್ಲದೇ ಆ ಮಾರ್ಗದಲ್ಲಿ ರಸ್ತೆ ಸಂಪೂರ್ಣ ಕಪ್ಪುಮಣ್ಣಿನಲ್ಲಿ ಹಾದು ಹೋಗಿದ್ದು, 2 ಬದಿಗಳಲ್ಲಿ ಗದ್ದೆಗಳು ಬರುತ್ತಿದ್ದರಿಂದ, ಚರಂಡಿಯಲ್ಲಿ ಮಳೆ ನೀರು ಹೋಗುವ 2014ನೇ ಸಾಲಿನ ಆಗಸ್ಟ್ ತಿಂಗಳಿನಲ್ಲಿ ನಿರಂತರವಾಗಿ ಸುರಿದ ಮಳೆಯಿಂದ ನೀರು ಹೆಚ್ಚಾಗಿ ರಸ್ತೆಯ ಮೇಲೆ ಹರಿದು ಕಿ.ಮಿ.2 ರಿಂದ 4 ರವರೆಗೆ ಕೆಲವು ಕಡೆ ರಸ್ತೆ ಕುಸಿದಿದ್ದು ಮತ್ತು ಅದನ್ನು ಗುತ್ತಿಗೆದಾರರಿಂದ ಸರಿಪಡಿಸಲಾಗಿರುತ್ತದೆ ಮತ್ತು ಅದಲ್ಲದೇ ರಸ್ತೆಯ ಬದಿಯಲ್ಲಿ ವಾಸಿಸುವ ರೈತರು ರಸ್ತೆಯಲ್ಲಿ ತಿಪ್ಪೆ ಹಾಕಿ, ಕೇಜ್ ವೀಲ್‌ನಲ್ಲಿ ಸಂಚಾರ ಮಾಡಿದ್ದರಿಂದ, ಕೆಲವೊಂದು ಕಡೆ ರಸ್ತೆ ಹಾನಿಯಾಗಿದ್ದು, ಗುತ್ತಿಗೆದಾರರಿಂದ ಸರಿಪಡಿಸಲಾಗಿರುತ್ತದೆ ಎಂದು ಆಕ್ಷೇಪಣೆಯನ್ನು ಸಲ್ಲಿಸಿ, ಆಪಾದನೆಯಿಂದ ಮುಕ್ತಗೊಳಿಸಲು ಕೇಳಿಕೊಂಡಿರುತ್ತಾರೆ. ಅದಲ್ಲದೇ, ಆಕ್ಷೇಪಣೆಯ ಜೊತೆಗೆ ಟೆಸ್ಟ್ ರಿಪೋರ್ಟ್,

30/9/

ಅನಲೈಜೇಷನ್ ರಿಪೋರ್ಟ್, ಕಾರ್ಯನಿರ್ವಾಹಕ ಅಭಿಯಂತರರ ಬದಲಾವಣೆ ಆಜ್ಞೆ, ಗುಣಮಟ್ಟ ಪರೀಕ್ಷಾ ವರದಿ ಮತ್ತು ಫೋಟೋಗ್ರಾಫ್‌ಗಳನ್ನು ಸಲ್ಲಿಸಿರುತ್ತಾರೆ.

10. ನಂತರದಲ್ಲಿ ದೂರುದಾರರು ಸಲ್ಲಿಸಿದ ದೂರಿನ ಸಾರಾಂಶಗಳು ಮತ್ತು ಅದಕ್ಕೆ ಲಗತ್ತಾದ ದಾಖಲೆಗಳು, ಆಪಾದಿತ ಸರ್ಕಾರಿ ನೌಕರರ ಆಕ್ಷೇಪಣೆ ಮತ್ತು ಅದಕ್ಕೆ ಲಗತ್ತಾದ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

11. ಈ ಪ್ರಕರಣದ ಕಡತವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿ, ದೂರುದಾರರು ದೂರಿನಲ್ಲಿ ಹೇಳಿದಂತೆ ಆಪಾದಿತ ಸರ್ಕಾರಿ ನೌಕರರು ಸಿಂಧನೂರು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದು ಮತ್ತು 2012-13ರಲ್ಲಿ ಕೈಗೊಂಡ ಸಿಂಧನೂರು-ಬಪ್ಪೂರು ರಸ್ತೆಯ ನವನೀಕರಣ ಮತ್ತು ಅಭಿವೃದ್ದಿ ಕಾರ್ಯದ ಜವಬ್ದಾರಿಯಿದ್ದು, ಅದನ್ನು ಗುತ್ತಿಗೆದಾರರಾದ ಶ್ರೀ.ಗಣಪತಿ ರಾಮಮೋಹನ್‌ರವರ ಮುಖಾಂತರ ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕಾಗಿತ್ತು. ಆದರೆ, 2013ರ ಮಧ್ಯ ಅವಧಿಯಲ್ಲಿ ಅಭಿವೃದ್ದಿಪಡಿಸಿ ಮತ್ತು ನವನೀಕರಿಸಿದ ಆ ಟಾರ್ ರಸ್ತೆ ಅಲ್ಲಲ್ಲಿ ಪೂರ್ತಿ ಹಾಳಾಗಿದ್ದು, ಅದು ದೂರುದಾರರು ಹಾಜರುಪಡಿಸಿದ್ದ ಫೋಟೋಗಳಿಂದ ವ್ಯಕ್ತವಾಗುತ್ತದೆ. ಆಪಾದಿತ ಸರ್ಕಾರಿ ನೌಕರರು ಆ ರಸ್ತೆ ಈ ದೂರು ಸಲ್ಲಿಸುವುದಕ್ಕೆ ಮುಂಚೆ ದೂರುದಾರರು ಹೇಳಿದಂತೆ ಅಲ್ಲಲ್ಲಿ ಹಾಳಾಗಿದ್ದನ್ನು ಅಲ್ಲಗಳೆದಿರುವುದಿಲ್ಲ. ಆದರೆ, ಆಪಾದಿತ ಸರ್ಕಾರಿ ನೌಕರರು ರಸ್ತೆ ಸಂಪೂರ್ಣ ಕಪ್ಪು ಮಣ್ಣಿನಲ್ಲಿ ಹಾದು ಹೋಗಿದ್ದು, 2014ನೇ ಅಗಸ್ಟ್‌ನಲ್ಲಿ ಬಿದ್ದ ಭಾರಿ ಮಳೆಗೆ ಕಾಲುವೆ ನೀರು ರಸ್ತೆಯ ಮೇಲೆ ಹರಿದಿದ್ದರಿಂದ, ಕೆಲವೊಂದು ಕಡೆ ರಸ್ತೆ ಕುಸಿದಿದೆ ಮತ್ತು ಅದನ್ನು ದುರಸ್ತಿ ಮಾಡಲಾಗುತ್ತಿದೆ ಮತ್ತು ಅದಲ್ಲದೇ, ರೈತರು ಕೇಜ್‌ವೀಲ್ ಓಡಿಸಿದ್ದರಿಂದ ಕೆಲವೊಂದು ಕಡೆ ರಸ್ತೆ ಹಾಳಾಗಿದ್ದು, ಗುತ್ತಿಗೆದಾರರಿಂದ ಸರಿಪಡಿಸಲಾಗಿದೆ ಎಂದು ವಾದಿಸಿರುತ್ತಾರೆ. ರಸ್ತೆ ಕಾಮಗಾರಿ ಮುಗಿದಿದ್ದು 2013ರ ಮಧ್ಯದ ಅವಧಿಯಲ್ಲಿ ಮತ್ತು ಈ ದೂರು ಸಲ್ಲಿಸಿದ್ದು 2015ರ ಫೆಬ್ರವರಿ ತಿಂಗಳಿನಲ್ಲಿ. ಇದನ್ನು ಗಮನಿಸಿದಾಗ ಕೇವಲ ಒಂದೂವರೆ ವರ್ಷದ ಅವಧಿಯಲ್ಲಿ ರಸ್ತೆ ಅಲ್ಲಲ್ಲಿ ಕುಸಿದಿದ್ದು, ಹಾಳಾಗಿದ್ದು ಪರಿಗಣನೆಗೆ ತೆಗೆದುಕೊಂಡರೆ ರಸ್ತೆ ಕಳಪೆ ಸಾಮಾಗ್ರಿಗಳನ್ನು ಬಳಸಿ ಮಾಡಿದ್ದಾರೆಂದು ಕಂಡುಬಂದಿದ್ದಲ್ಲದೇ, ಗುಣಮಟ್ಟದ ಪರೀಕ್ಷೆಯನ್ನು

30/9/2016

ಮಾಡಿದ್ದೇವೆಂದು ಸೃಷ್ಟಿಸಿ ಸಲ್ಲಿಸಿರುವುದು ಕಂಡುಬರುತ್ತದೆ. ಅದಲ್ಲದೇ, ಆಪಾದಿತ ಸರ್ಕಾರಿ ನೌಕರರು ಸಲ್ಲಿಸಿದ ಫೋಟೋಗಳನ್ನು ಗಮನಿಸಿದಾಗ ಅವರು ಹೇಳಿದ ಹಾಗೆ ರಸ್ತೆ ಸಂಪೂರ್ಣವಾಗಿ ಕಪ್ಪು ಮಣ್ಣಿನಲ್ಲಿ ಹಾದು ಹೋಗುತ್ತದೆ ಎಂದು ಪ್ರತಿಪಾದಿಸಿದ್ದು, ಸರಿಯಾದ ವಾದವಲ್ಲ ಎಂದು ಕಂಡುಬರುತ್ತದೆ. ರಸ್ತೆಯ ಪಕ್ಕದಲ್ಲಿದ್ದ ಜಮೀನನ್ನು ಫೋಟೋಗಳಲ್ಲಿ ಗಮನಿಸಿದಾಗ ಅದು ಗಟ್ಟಿ ನೆಲವಾಗಿದ್ದು, ಮರಳು ಮಿಶ್ರಿತ ಕೆಂಪು ಬಣ್ಣದ್ದಾಗಿದ್ದು ಕಂಡುಬರುತ್ತದೆ. ಅದಲ್ಲದೇ, ಆ ಪ್ರದೇಶದ ಜಮೀನುಗಳು ಪೂರ್ತಿಯಾಗಿ ಕಪ್ಪು ಮಣ್ಣಿನಿಂದ ಕೂಡಿದೆ ಎಂಬ ಬಗ್ಗೆ ಯಾವ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ರಸ್ತೆ ಕಾಮಗಾರಿ ಮೊದಲೇ ಈಗಾಗಲೇ ಇದ್ದ ಟಾರ್ ರಸ್ತೆಯನ್ನು ಅಭಿವೃದ್ಧಿಗೊಳಿಸಿ, ನವನೀಕರಣ ಮಾಡಿ, ಸಮರ್ಪಕವಾಗಿ ಟಾರ್ ಹಾಕುವ ಕಾಮಗಾರಿಯಾಗಿದ್ದು, ಎಸ್ಟಿಮೇಟ್‌ನಂತೆ ಕಂಡುಬರುತ್ತದ. ಆದರೆ, ರಸ್ತೆ ಸುಮಾರು ಒಂದೂವರೆ ವರ್ಷದಲ್ಲಿ ಹಾಳಾಗಿದ್ದನ್ನು ಗಮನಿಸಿದಾಗ ಆಪಾದಿತ ಸರ್ಕಾರಿ ನೌಕರರು ಗುತ್ತಿಗೆದಾರರಿಂದ ರಸ್ತೆ ಕಾಮಗಾರಿಯನ್ನು ಎಸ್ಟಿಮೇಟ್‌ನಂತೆ ಅನುಷ್ಠಾನಗೊಳಿಸುವಲ್ಲಿ ವಿಫಲರಾಗಿ ಕರ್ತವ್ಯ ಲೋಪವೆಸಗಿದ್ದು ಕಂಡುಬರುತ್ತದೆ, ಅದಲ್ಲದೇ, ರಸ್ತೆ ಕಾಮಗಾರಿಗಳನ್ನು ಕಳಪೆ ಸಾಮಾಗ್ರಿಗಳಿಂದ ಅಸಮರ್ಪಕವಾಗಿ ಅನುಷ್ಠಾನಗೊಳಿಸಲು ಪರೋಕ್ಷವಾಗಿ ಕಾರಣರಾಗಿದ್ದು, ರಸ್ತೆ ಹಾಳಾಗಿದ್ದಕ್ಕೆ ಜವಾಬ್ದಾರರಾಗಿರುತ್ತಾರೆ.

12. ಈ ಪ್ರಕರಣದ ದೂರಿನ ಸಂಗತಿಗಳು ಮತ್ತು ದಾಖಲೆಗಳನ್ನು ಗಣನೆಗೆ ತೆಗೆದುಕೊಂಡಾಗ ಆಪಾದಿತ ಸರ್ಕಾರಿ ನೌಕರರು ನೀಡಿದ ಆಕ್ಷೇಪಣೆಯಲ್ಲಿ ಯಾವ ಸಮಾಧಾನಕರವಾದ ಅಂಶಗಳು ಕಂಡುಬರುವುದಿಲ್ಲವಾದ್ದರಿಂದ, ಅವರ ವಿರುದ್ಧದ ತನಿಖೆಯನ್ನು ಕೈಬಿಡಲು ಯಾವುದೇ ತೃಪ್ತಿಕರ/ಸಮಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

13. ಆದುದರಿಂದ, ಆಪಾದಿತ ಸರ್ಕಾರಿ ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ (3)(1)(i) ರಿಂದ (iii)ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು

ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿಯಲ್ಲಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಲಾಗಿ, ಶಿಸ್ತು ನಡವಳಿಕೆಯನ್ನು ಆಪಾದಿತ ಸರ್ಕಾರಿ ನೌಕರರ ವಿರುದ್ಧ ಹೂಡಿ ಇಲಾಖಾ ವಿಚಾರಣೆಯನ್ನು ಉಲ್ಲೇಖ ಒಂದರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ವಹಿಸಿದ್ದು ಗೌರವಾನ್ವಿತ ಉಪಲೋಕಾಯುಕ್ತ -1 ರವರು ಈ ವಿಚಾರಣಾಧಿಕಾರಿಯನ್ನು ವಿಚಾರಣೆ ನಡೆಸಲು ನೇಮಕಮಾಡಿದ್ದಾರೆ. ಆದ್ದರಿಂದ ನಿಮ್ಮ ವಿರುದ್ಧ ಈ ಆಪಾದನೆ.

14. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ ಆಫ್ ಚಾರ್ಜಸ್) ಆಸನೌ ರವರಿಗೆ ಕಳುಹಿಸಿದ್ದು, ಸದರಿ ಆಪಾದಣೆ ಪ್ರತಿ ಆಸನೌ ರವರಿಗೆ ಜಾರಿಯಾಗಿ ಆಸನೌ ರವರು ದಿನಾಂಕ 21.11.2016 ರಂದು ಹಾಜರಾಗಿದ್ದು, ಆಸನೌ ರವರು ಪ್ರಥಮ ಮೌಖಿಕ ಹೇಳಿಕೆ ನಿಯಮ-11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.
15. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.
16. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.
17. ದೂರಿನ ಪ್ರತಿ ಮತ್ತು ಅದಕ್ಕೆ ಲಗತ್ತಾದ ದಾಖಲೆಗಳನ್ನು ಎದುರುದಾರರಿಗೆ ಕಳುಹಿಸಿ ಅವರ ಆಕ್ಷೇಪಣೆ/ತಕರಾರನ್ನು ಪಡೆಯಲಾಗಿದ್ದು, ಸದರಿ ಆಕ್ಷೇಪಣೆಯಲ್ಲಿ ಎದುರುದಾರರು ಆಪಾದಣೆಗಳನ್ನು ಅಲ್ಲಗಳೆಯುತ್ತಾ, ಕಾಮಗಾರಿಗಳನ್ನು ಗುತ್ತಿಗೆದಾರರ ಮುಖಾಂತರ ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗಿದೆ. ಅಂದಾಜು ಪತ್ರಿಕೆಯಲ್ಲಿ ಕಲ್ಪಸಲಾಗಿದ್ದ ರಸ್ತೆ ಕಾಮಗಾರಿಗಳನ್ನು ಅಧೀಕ್ಷಕ ಅಭಿಯಂತರರು ಪರಿವೀಕ್ಷಣೆ ಮಾಡಿ ಬದಲಾವಣೆ ಮಾಡಿ ನಿರ್ವಹಿಸಲು ಅನುಮತಿ ನೀಡಿರುತ್ತಾರೆ ಮತ್ತು ಅಂದಾಜು ಪತ್ರಿಕೆಯಂತೆ ಕಾಮಗಾರಿಯನ್ನು ನಿರ್ವಹಿಸುವಲ್ಲಿ ಯಾವುದೇ ಲೋಪವಗಿಲ್ಲ, ಅದಲ್ಲದೇ ಆ ಮಾರ್ಗದಲ್ಲಿ ರಸ್ತೆ ಸಂಪೂರ್ಣ ಕಪ್ಪುಮಣ್ಣಿನಲ್ಲಿ ಹಾದು ಹೋಗಿದ್ದು, 2 ಬದಿಗಳಲ್ಲಿ ಗದ್ದೆಗಳು ಬರುತ್ತಿದ್ದರಿಂದ, ಚರಂಡಿಯಲ್ಲಿ ಮಳೆ ನೀರು ಹೆಚ್ಚಾಗಿ ರಸ್ತೆಯ ಮೇಲೆ

30/9/

ಹರಿದು ಕಿ.ಮೀ 2 ರಿಂದ 4 ರವರೆಗೆ ಕೆ4ಲವು ಕಡೆ ರಸ್ತೆ ಕುಸಿದಿದ್ದು ಮತ್ತು ಅದನ್ನು ಗುತ್ತಿಗೆದಾರರಿಂದ ಸರಿಪಡಿಸಲಾಗಿರುತ್ತದೆ. ಮತ್ತು ಅದಲ್ಲದೇ ರಸ್ತೆಯ ಬದಿಯಲ್ಲಿ ವಾಸಿಸುವ ರೈತರು ರಸ್ತೆಯಲ್ಲಿ ತಿಪ್ಪೆ ಹಾಕಿ, ಕೇಜ್ ವೀಲ್‌ನಲ್ಲಿ ಸಂಚಾರ ಮಾಡಿದ್ದರಿಂದ, ಕೆಲವೊಂದು ಕಡೆ ರಸ್ತೆ ಹಾನಿಯಾಗಿದ್ದು, ಗುತ್ತಿಗೆದಾರರಿಂದ ಸರಿಪಡಿಸಲಾಗಿರುತ್ತದೆ ಎಂದು ಆಕ್ಷೇಪಣೆಯನ್ನು ಸಲ್ಲಿಸಿ, ಆಪಾದನೆಯಿಂದ ಮುಕ್ತಗೊಳಿಸಲು ಕೇಳಿಕೊಂಡಿರುತ್ತಾರೆ. ಅದಲ್ಲದೇ, ಆಕ್ಷೇಪಣೆಯ ಜೊತೆಗೆ ಟೆಸ್ಟ್ ರಿಪೋರ್ಟ್, ಅನಲೈಜೇಷನ್ ರಿಪೋರ್ಟ್, ಕಾರ್ಯನಿರ್ವಾಹಕ ಅಭಿಯಂತರರ ಬದಲಾವಣೆ ಆಜ್ಞೆ, ಗುಣಮಟ್ಟ ಪರೀಕ್ಷಾ ವರದಿ ಮತ್ತು ಪೋಟೋಗ್ರಫ್‌ಗಳನ್ನು ಸಲ್ಲಿಸಿರುತ್ತಾರೆ.

18. ನಂತರ ದೂರುದಾರರು ಸಲ್ಲಿಸಿದ ದೂರಿನ ಸಾರಾಂಶಗಳು ಮತ್ತು ಅದಕ್ಕೆ ಲಗತ್ತಾದ ದಾಖಲೆಗಳು, ಎದುರುದಾರರ ಆಕ್ಷೇಪಣೆ ಮತ್ತು ಅದಕ್ಕೆ ಲಗತ್ತಾದ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

19. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು ಪ್ರಾ.ಸ.1 ಎಂದು ಸಾಕ್ಷ್ಯ ಹಾಜರುಪಡಿಸಿ ತಮ್ಮ ಪರವಾಗಿ, ನಿ.ಪಿ.1 ರಿಂದ ನಿ.ಪಿ.6 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಮಂಡನಾಧಿಕಾರಿಗಳ ವಿಚಾರಣೆ ಅಂತ್ಯಗೊಂಡ ನಂತರ ಎದುರುದಾರರ ಎಸ್.ಓ.ಎಸ್ ಹೇಳಿಕೆಯನ್ನು ದಾಖಲೆ ಮಾಡಿಕೊಳ್ಳಲಾಗಿದ್ದು ವಿಚಾರಣೆಯನ್ನು ಆಸನೌ ರವರ ಸಾಕ್ಷಿಗಾಗಿ ಮುಂದೂಡಿದ್ದು, ಆಸನೌ ರವರು ತಮ್ಮ ಪರವಾಗಿ ತಮ್ಮ ಸಾಕ್ಷ್ಯವನ್ನು ಡಿಡಬ್ಲ್ಯೂ-1 ಎಂದು ಅಲ್ಲದೇ ತಮ್ಮ ಪರವಾಗಿ ನಿ.ಡಿ.1 ರಿಂದ ನಿ.ಡಿ.7 ರವರೆಗೆ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

20. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಆಲಿಸಲಾಯಿತು. ಮಂಡನಾಧಿಕಾರಿಯವರು ವಾದವನ್ನು ಮೌಖಿಕವಾಗಿ ಮಂಡಿಸಿರುತ್ತಾರೆ. ಆಸನೌ ರವರು ತಮ್ಮ ಲಿಖಿತ ವಾದವನ್ನು ಸಲ್ಲಿಸಿರುತ್ತಾರೆ. ಮಂಡನಾಧಿಕಾರಿಗಳ ವಾದವನ್ನು ಆಲಿಸಿ ಪ್ರಕರಣವನ್ನು ಅಂತಿಮ ತೀರ್ಪಿಗಾಗಿ ಮುಂದೂಡಲಾಯಿತು.

21. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ-1: ವಿಚಾರಣಾ ಪ್ರಾಧಿಕಾರವು ಆಸನೌ ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ ರವರು ಆಸನೌ ಶ್ರೀ.ಜಿ.ನಾಗರಾಜ, ಸಹಾಯಕ ಕಾರ್ಯಪಾಲಕ**

30/9/

ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಹೊಸಪೇಟೆ, ಬಳ್ಳಾರಿ ಜಿಲ್ಲೆ) ರವರು ಸಿಂಧನೂರಿನಿಂದ ಬಪ್ಪೂರ ವರೆಗೆ 0.00ಕಿಮೀ ನಿಂದ 8.00ಕಿ.ಮೀ ವರೆಗೆ ಮತ್ತು 8.00ಕಿಮೀ ನಿಂದ 20.00 ಕಿಮೀ ವರೆಗಿನ ರಸ್ತೆಯನ್ನು 5054 ORF Appendix E New Works 2011-12 ನೇ ಸಾಲಿನಲ್ಲಿ ಮಾಡಿದ್ದು, ಕಳಪೆ ಕಾಮಗಾರಿ ಕರ್ತವ್ಯ ಲೋಪ ಲೋಪವೆಸಗಿದ್ದಾರೆ ಎಂದು ಆಪಾದಿಸಲಾದ ಆರೋಪಗಳನ್ನು ಸಾಬೀತುಪಡಿಸಿದ್ದಾರೆಯೇ?

ಅಂಶ–2: ಆದೇಶವೇನು?

22. ಕಡತವನ್ನು ಪರಿಶೀಲಿಸಲಾಯಿತು, ಲಭ್ಯವಿರುವ ಮೌಖಿಕ ಮತ್ತು ಲಿಖಿತ ದಾಖಲೆ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

23. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

ಅಂಶ 1: ನಕರಾತ್ಮಕ
ಅಂಶ 2: ಅಂತಿಮ ಆದೇಶದಂತೆ.

:: ಕಾರಣಗಳು ::

24. ಅಂಶ 1:

25. ಆಸನೌ ರವರ ಮೇಲೆ ಮಾಡಿದ ಆರೋಪಗಳನ್ನು ಸಾಬೀತುಪಡಿಸಲು ದೂರುದಾರರು ಪ್ರಾ.ಸ–1 ರವರ ಸಾಕ್ಷ್ಯವನ್ನು ಹಾಜರುಪಡಿಸಿದ್ದು, ಸದರಿಯವರು ತಮ್ಮ ಮೌಖಿಕ ಸಾಕ್ಷ್ಯದಲ್ಲಿ ಆಸನೌ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಗ್ರಾಮೀಣ ಸಿಂಧನೂರು ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಸಿಂಧನೂರಿನಿಂದ ಬಪ್ಪೂರು ಗ್ರಾಮದ ವರೆಗೆ 20.00ಕಿಮೀ ದೂರದ ರಸ್ತೆ ಕಾಮಗಾರಿ ಕೈಗೊಂಡಿದ್ದು, ಕಾಮಗಾರಿ ಗುಣಮಟ್ಟ ಕಳಪೆ ಗುಣಮಟ್ಟದ್ದಾಗಿದ್ದು ಮತ್ತು ಸಾರ್ವಜನಿಕರ ವಾಹನ ಓಡಾಟಕ್ಕೆ ತೊಂದರೆಯಾಗಿದೆ ವಾಹನಗಳ ಚಕ್ರದ ಟಯರ್‌ಗಳು

30/9/20..

ಒಡೆದು ಸಾರ್ವಜನಿಕರಿಗೆ ನಷ್ಟವಾಗುತ್ತಿದ್ದು ಈ ಬಗ್ಗೆ ಸಂಬಂಧಿತ ಆಸನೌ ರವರ ಮೇಲೆ ತಾವು ದೂರು ಸಲ್ಲಿಸಿದ ಸಾಕ್ಷ್ಯ ನುಡಿದಿದ್ದು ದೂರು ಮತ್ತು ನಮೂನೆ-1 ಮತ್ತು ನಮೂನೆ-2 ದಾಖಲೆಗಳನ್ನು ನಿ.ಪಿ-1 ಮತ್ತು ನಿ.ಪಿ-2 ಎಂದು ಮತ್ತು ಸದರಿ ರಸ್ತೆಯ ಕಾಮಗಾರಿ ದಾಖಲೆಗಳನ್ನು ನಿ.ಪಿ-3 ಎಂದು ಹಾಗೂ ಯೋಜನೆ ಅಂದಾಜು ಪಟ್ಟಿಯನ್ನು ನಿ.ಪಿ-4 ಎಂದು, ಭಾವಚಿತ್ರಗಳನ್ನು ನಿ.ಪಿ-5 ಎಂದು ಗುರುತಿಸಿಕೊಂಡಿದ್ದಾರೆ. ತಾಂತ್ರಿಕ ವಿಭಾಗದ ಅಧಿಕಾರಿಗಳ ಪರಿಣಿತ ವರದಿಯನ್ನು ನಿ.ಪಿ-6 ಎಂದು ಗುರುತು ಹಾಕಲಾಗಿದೆ.

26. ಆಸನೌ ವಕೀಲರು ತಮ್ಮ ಪಾಟೀ ಸವಾಲಿನಲ್ಲಿ ಪ್ರಶ್ನಾತೀತ ರಸ್ತೆ ಕಾಮಗಾರಿ 2012 ರಲ್ಲಿ ಪ್ರಾರಂಭವಾಗಿ ಮೇ 2013 ರಲ್ಲಿ ಅಂತ್ಯಗೊಂಡಿದ್ದ ಬಗ್ಗೆ ವಾಸ್ತವಾಂಶವನ್ನು ಸಾಕ್ಷಿಯಿಂದ ದಾಖಲೆ ಮೇಲೆ ತಂದಿದ್ದಾರೆ. ಆಸನೌ ರವರ ಪ್ರಮುಖ ರಕ್ಷಣಾತ್ಮಕ ಹೇಳಿಕೆ ಏನೆಂದರೆ ದಿ:20.05.2013 ರಂದು ಅಂದಿನ ಅಧೀಕ್ಷಕ ಅಭಿಯಂತರರು ಶಿವಯೋಗಿ ಹಿರೇಮಠ ರವರು ಕಾಮಗಾರಿಗಳನ್ನು ಪರಿಶೀಲಿಸಿ ಕೆಲವೊಂದು ಬದಲಾವಣೆ ಮಾಡಲು ವಿಷಯ ತಿಳಿಸಿದ್ದರಿಂದ ತಾವು ಬದಲಾವಣೆ ಮಾಡಿದ ಕಾಮಗಾರಿ ಕೈಗೊಂಡ ಮಾಹಿತಿ ದೂರುದಾರರಿಗೆ ಇದ್ದ ಬಗ್ಗೆ ವಾಸ್ತವಾಂಶವನ್ನು ದಾಖಲೆಯಲ್ಲಿ ತರುವ ಪ್ರಯತ್ನ ಮಾಡಿದ್ದಾರೆ. ಸದರಿ ರಸ್ತೆ ಕಾಮಗಾರಿ 0.5ಕಿಮೀ ರಿಂದ 4.00ಕಿಮೀ ದೂರದ ವರೆಗೆ ಇದ್ದ ಕಾಮಗಾರಿಯನ್ನು ಕೈ ಬಿಟ್ಟು 6.00ಕಿಮೀ ಯಿಂದ 8.00ಕಿಮೀ ವರೆಗೆ ರಸ್ತೆ ನಿರ್ಮಾಣ ಮಾಡುವ ಬದಲಾವಣೆ ಮಾಡಿದ ಅಭಿಯಂತರರು, ಅಧೀಕ್ಷಕರು ಆದೇಶದ ಪ್ರತಿಯನ್ನು ಸಾಕ್ಷಿಗೆ ತೋರಿಸಿ ನಿ.ಡಿ-1 ಎಂದು ಗುರುತು ಹಾಕಿಸಿಕೊಂಡಿದ್ದಾರೆ. ಅಲ್ಲದೇ ದೂರುದಾರರು ಕಳಪೆ ರಸ್ತೆ ಕಾಮಗಾರಿ ಮತ್ತು ಕಳಪೆ ಗುಣಮಟ್ಟದ ನಿರ್ಮಾಣವನ್ನು ತೋರಿಸುವ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂಬುದನ್ನು ಪಾಟೀ ಸವಾಲಿನಲ್ಲಿ ವ್ಯಕ್ತ ಪಡಿಸಿಕೊಂಡಿದ್ದಾರೆ. 2014 ರಲ್ಲಿ ಲಿಂಗಸುಗೂರು ತಾಲ್ಲೂಕಿನಲ್ಲಿ ವಿಪರೀತ ಮಳೆಯಾಗಿದ್ದ ಕಾರಣ ಸರ್ಕಾರಿ ರಸ್ತೆಗಳು ನಷ್ಟಕ್ಕೊಳಗಾಗಿದ್ದ ಬಗ್ಗೆ ಪಾಟೀ ಸವಾಲಿನಲ್ಲಿ ಸೂಚನೆ ಮಾಡಲಾಗಿದೆ. ಲೋಕಾಯುಕ್ತ ಕಚೇರಿಯ ತಾಂತ್ರಿಕ ವಿಭಾಗದಿಂದ ಯಾವುದೇ ಪರಿಣಿತ ಅಧಿಕಾರಿಗಳು ಕಾಮಗಾರಿ ಪರಿಶೀಲಿಸಿ ಬಂದಿಲ್ಲವೆಂದು ಪ್ರಾ.ಸ-1 ರವರು ಒಪ್ಪಿಕೊಂಡಿದ್ದಾರೆ.

30/9/

27. ಪ್ರಾ.ಸ-1 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಸದರಿಯವರು ವೃತ್ತಿಯಲ್ಲಿ ನ್ಯಾಯವಾದಿಗಳು/ವಕೀಲರು ಆಗಿದ್ದು ರಸ್ತೆ ಕಳಪೆ ಕಾಮಗಾರಿ ಬಗ್ಗೆ ಆರೋಪವನ್ನು ಬಲವರ್ಧನೆಗೊಳಿಸಲು ಮತ್ತು ಪುಷ್ಟೀಕರಣಗೊಳಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಪ್ರಾ.ಸ-1 ರವರು ಹಾಜರುಪಡಿಸಿದ ದಾಖಲೆ ನಿ.ಪಿ-3 ಮತ್ತು ನಿ.ಪಿ-4 ನ್ನು ಗಮನಕ್ಕೆ ತೆಗೆದುಕೊಂಡಾಗ ಸಿಂಧನೂರು ಉಪವಿಭಾಗ, ಲೋಕೋಪಯೋಗಿ ಬಂದರು ಮತ್ತು ಓ.ನಾ.ಜ.ಸ., ಸ.ಕಾ., ಇಂಜಿನಿಯರ್ ಕಚೇರಿಯಿಂದ ಪಡೆದ ದಾಖಲೆಗಳಾಗಿದ್ದು ,ನಿ.ಪಿ-3 ರಲ್ಲಿ ಸಿಂಧನೂರು ಬಪ್ಪೂರು ರಸ್ತೆ 5.00ಕಿಮೀ ಕಾಮಗಾರಿಯನ್ನು ಗರಪತಿ ರಾಮಮೋಹನ್ 1ನೇ ದರ್ಜೆಯ ಗುತ್ತಿಗೆದಾರ ಇವರಿಗೆ ಇಲಾಖೆಯಿಂದ ಮಂಜೂರು ಮಾಡಿದ್ದು ಕಂಡು ಬರುತ್ತಿದೆ. ನಿ.ಪಿ-4 ಕಾಮಗಾರಿ ಯೋಜನೆ ದಾಖಲೆಯಾಗಿದ್ದು ಅದರಲ್ಲಿ ಗುತ್ತಿಗೆ ಮಂಜೂರಾತಿ ಮತ್ತು ನಕಾಶೆ ವಿವರಗಳು ಕಂಡು ಬರುತ್ತಿದ್ದು, ನಿ.ಪಿ-6 ರಲ್ಲಿ ದೂರುದಾರರು ಪತ್ರ ಮುಖೇನ ಎ.ಇ.ಇ., ಪಿಡಬ್ಲ್ಯೂಡಿ ಬಂದರು ಉಪವಿಭಾಗ ಬಳ್ಳಾರಿ ಇವರು ಸದರಿ ರಸ್ತೆ ಕಾಮಗಾರಿಯ ಪರೀಕ್ಷಾ ವರದಿಯ ದಾಖಲೆಗಳನ್ನು ಹಾಜರುಪಡಿಸಿದ್ದು, ಸದರಿ ಪರೀಕ್ಷಾ ವರದಿಯಲ್ಲಿ ಕಳಪೆ ಗುಣಮಟ್ಟದ ಕಾಮಗಾರಿ ಬಗ್ಗೆ ಯಾವುದೇ ಉಲ್ಲೇಖ ಕಂಡು ಬರುತ್ತಿಲ್ಲ.

28. ಆಸನೌ ಸ.ಕಾ.ಅ., ತಮ್ಮ ರಕ್ಷಣಾತ್ಮಕ ಹೇಳಿಕೆಯಲ್ಲಿ ಪ್ರಥಮತವಾಗಿ ಸದರಿ ಸಿಂಧನೂರುನಿಂದ ಬಪ್ಪೂರು ಗ್ರಾಮದ ವರೆಗಿನ ರಸ್ತೆ 5.00ಕಿಮೀ ವರೆಗೆ ಮಂಜೂರು ಆಗಿದ್ದು ನಂತರ ಮೇಲಾಧಿಕಾರಿಗಳಾದ ಮುಖ್ಯ ಅಭಿಯಂತರರ ಕಚೇರಿ ರವರು ಸದರಿ ರಸ್ತೆ ಕಾಮಗಾರಿ ಯೋಜನೆಯನ್ನು ಮಾರ್ಪಾಡು ಮಾಡಿ 1 ರಿಂದ 4ಕಿಮೀ ಇದ್ದ ಪೂರ್ವ ಯೋಜನೆಯನ್ನು 5.00ಕಿಮೀ ನಿಂದ 8.00ಕಿಮೀ ಎಂದು ಮತ್ತು 8.00ಕಿಮೀ ನಿಂದ 13.00ಕಿಮೀ ವರೆಗೆ ಅಂದರೆ 7.00ಕಿಮೀ ರಸ್ತೆಯನ್ನು ಗಟ್ಟಿಮುಟ್ಟಾದ ಗುಣಮಟ್ಟಕ್ಕೆ ಒಳಪಟ್ಟಂತೆ (ಸ್ಟ್ರೆಂತ್‌ನಿಂಗ್) ಅಭಿವೃದ್ಧಿಗೊಳಿಸಲು ಹಾಗೂ 1ಕಿಮೀ ನಿಂದ 4.00ಕಿಮೀ ವರೆಗೆ ಒಟ್ಟಾಗಿ 3 ಕಿಮೀ ಉದ್ದದ ರಸ್ತೆಯನ್ನು ನವೀಕರಣಗೊಳಿಸಲು ಆಸ್ಪದ ನೀಡಲಾಗಿತ್ತು ಎಂಬ ವಿಷಯವನ್ನು ಸಾಬೀತುಪಡಿಸಲು ಪ್ರಾ.ಸ-1 ರವರ ಸಾಕ್ಷ್ಯದಲ್ಲಿ ಪಾಟೀ ಸವಾಲು ಮಾಡುವಾಗ ನಿ.ಡಿ-1 ಎಂದು ಗುರುತು

ಹಾಕಿಸಿಕೊಂಡಿದ್ದಾರೆ. ಸದರಿ ದಾಖಲೆಯನ್ನು ಗಮನಿಸಿದಾಗ ಅಧೀಕ್ಷಕರು ಲೋಕೋಪಯೋಗಿ ಬಳ್ಳಾರಿ ವೃತ್ತ ಬಳ್ಳಾರಿ ಇವರು ದಿ:20.05.2013 ರಂದು ಪರಿಶೀಲಿಸಿ ಸಿಂಧನೂರಿನಿಂದ ಬಪ್ಪೂರವರೆಗೆ ಕಾಮಗಾರಿಯನ್ನು ಮಾಡಿ 1 ರಿಂದ 4ಕಿಮೀ ಇದ್ದ ಪೂರ್ವ ಯೋಜನೆಯನ್ನು 5.00ಕಿಮೀ ನಿಂದ 8.00ಕಿಮೀ ಎಂದು ಮತ್ತು 8.00ಕಿಮೀ ನಿಂದ 13.00ಕಿಮೀ ವರೆಗೆ ಅಂದರೆ 7.00ಕಿಮೀ ರಸ್ತೆಯನ್ನು ಅಭಿವೃದ್ಧಿಗೊಳಿಸಿ ಸರಿಪಡಿಸುವಂತೆ ತಿದ್ದುಪಡಿ ಆದೇಶ ಮತ್ತು ಸೂಚನೆ ಆಸನೌ ರವರಿಗೆ ನೀಡಿದ್ದು ಕಂಡು ಬರುತ್ತದೆ. ಅಲ್ಲದೇ ಸದರಿ ಆದೇಶದ ಪ್ರತಿಯನ್ನು ಸಂಬಂಧಿತ ಮೇಲಾಧಿಕಾರಿಗಳಿಗೆ ಕಳುಹಿಸಿದ್ದು ಕಂಡು ಬರುತ್ತಿದೆ.

29. ಆಸನೌ ರವರು ತಮ್ಮ ಮೌಖಿಕ ಸಾಕ್ಷ್ಯದಲ್ಲಿ ತಮ್ಮ ರಕ್ಷಣಾತ್ಮಕ ಹೇಳಿಕೆಯಂತೆ ಸಾಕ್ಷ್ಯ ನುಡಿದಿದ್ದು ಅದಕ್ಕೆ ಪೂರಕವಾಗಿ ನಿ.ಡಿ–2ನ್ನು ಹಾಜರುಪಡಿಸಿದ್ದು ಸದರಿ ದಾಖಲೆ ಲಿಂಗಸೂರು ಉಪವಿಭಾಗದಲ್ಲಿ ವಿಪರೀತ ಮಳೆ ಆದಕಾರಣ ರೈತರ ಜಮೀನಿನಲ್ಲಿ ಭೂ ಕುಸಿತವಾಗಿದ್ದು ರಸ್ತೆಗಳು ನಷ್ಟಕ್ಕೆ ಒಳಗಾದ ಬಗ್ಗೆ ಉಲ್ಲೇಖ ಮಾಡಿ ಸಹಾಯಕ ಆಯುಕ್ತರು ಲಿಂಗಸೂರು ಬರೆದ ಪತ್ರವನ್ನು ಹಾಜರುಪಡಿಸಿದ್ದಾರೆ ಮತ್ತು ನಿ.ಡಿ–3 ರಲ್ಲಿ ಸಹಾಯಕ ಆಯುಕ್ತರು ಅಗಸ್ಟ್ 2014 ರಲ್ಲಿ ಅತೀ ಮಳೆಯಿಂದ ಲಿಂಗಸೂರು ಉಪವಿಭಾಗದಲ್ಲಿ ರಸ್ತೆಗಳು ಸಾಕಷ್ಟು ನಷ್ಟಕ್ಕೆ ಒಳಗಾಗಿದ್ದು ಉಲ್ಲೇಖ ಮಾಡಿದ್ದಾರೆ. ಆಸನೌ ರವರು ಭಾವಚಿತ್ರಗಳನ್ನು ಹಾಜರು ಪಡಿಸಿದ್ದು ಅದರಲ್ಲಿ ರಸ್ತೆ ಕಾಮಗಾರಿಯ ಗುಣಮಟ್ಟ ಪರೀಕ್ಷೆ (ಕ್ವಾಲಿಟಿ ಕಂಟ್ರೋಲ್ ಟೆಸ್ಟ್) ಮಾಡಿದ್ದು ಕಂಡು ಬರುತ್ತಿದೆ.

30. ಈ ಎಲ್ಲಾ ಸಾಕ್ಷ್ಯಗಳನ್ನು ಹಾಗೂ ದಾಖಲೆಗಳನ್ನು ಗಮನಕ್ಕೆ ತೆಗೆದುಕೊಂಡಾಗ ಕಾನೂನು ಇಲಾಖೆ ಪ್ರಕ್ರಿಯೆಯಲ್ಲಿ ಅಧೀಕ್ಷಕರು, ಅಭಿತಯಂತರರ ಕಚೇರಿ ಬಳ್ಳಾರಿ ಇವರ ನಿರ್ದೇಶನದಂತೆ ರಸ್ತೆ ಕಾಮಗಾರಿಯಲ್ಲಿ ಮಾರ್ಪಾಡು ಬದಲಾವಣೆ ಆದ ವಿಷಯ ಅವರ ಗಮನಕ್ಕೆ ಬರದ ವಿಷಯ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ ಮತ್ತು ಪ್ರಶ್ನಾತೀತ ರಸ್ತೆ ಕಾಮಗಾರಿ ರಸ್ತೆ ಗುಣಮಟ್ಟದ ಕಾಮಗಾರಿ ಪರೀಕ್ಷೆಗೆ ಒಳಪಟ್ಟು ಸಕ್ಷಮ ಪ್ರಾಧಿಕಾರದಿಂದ ಪರೀಕ್ಷೆ ಮಾಡಿದ್ದು ಕೂಡಾ ವ್ಯಕ್ತವಾಗುತ್ತಿದೆ. ದಾಖಲೆಗಳಿಂದ 2014 ರಲ್ಲಿ ಅಕಾಲಿಕವಾಗಿ ಸುರಿದ ಭಾರಿ ಮಳೆಯಿಂದ ರಸ್ತೆ ನಷ್ಟಕ್ಕೆ ಒಳಪಟ್ಟಿದ್ದು ಅದನ್ನು ಕೂಡಾ ತದನಂತರ ಸರಿಪಡಿಸಿದ್ದು ಕಂಡು ಬರುತ್ತಿದೆ. ದಾಖಲೆಗಳನ್ನು ಪರಿಶೀಲಿಸಿದಾಗ ಪ್ರಾ.ಸ–1 ರವರ ದೂರನ್ನು ಏಪ್ರಿಲ್ 2015 ರಂದು ಸಲ್ಲಿಸಿದ್ದು, ಮತ್ತು ರಸ್ತೆ ಕಾಮಗಾರಿ

ಅಭಿವೃದ್ಧಿ ಸರಿಯಾಗಿ ಮಾಡಿಲ್ಲ ಎಂದು ಆರೋಪ ಮಾಡಲಾಗಿದೆ. ಆದರೆ ಸದರಿ ಕಾಮಗಾರಿ ಮಂಜೂರಾತಿ ವಗೈರೆಗಳನ್ನು 2011-12 ರಲ್ಲಿಯೇ ಕೈಗೊಂಡಿದ್ದು ಕಂಡು ಬರುತ್ತಿದೆ. 2014 ರಲ್ಲಿ ಸುರಿದ ನೈಸರ್ಗಿಕ ಮಳೆಯಿಂದ ರಸ್ತೆ ನಷ್ಟಕ್ಕೆ ಒಳಗಾಗಿದ್ದ ವಿಷಯವನ್ನು ಅಲ್ಲಗಳೆಯುಂತಿಲ್ಲ.

31. ಪ್ರಾ.ಸ-1 ರವರ ಮಾಡಿದ ಕಳಪೆ ಕಾಮಗಾರಿ ಆರೋಪಗಳನ್ನು ಪರಿಣಿತ ಅಭಿಯಂತರರು ಸಾಕ್ಷ್ಯ ಅತ್ಯವಶ್ಯಕವಾಗಿದ್ದು, ದೂರುದಾರರು ವೃತ್ತಿಯಲ್ಲಿ ವಕೀಲರಾಗಿದ್ದು ಕಳಪೆ ಕಾಮಗಾರಿ ಬಗ್ಗೆ ಆರೋಪ ಮಾಡಿದ್ದು ಅವರ ಮೌಖಿಕ ಸಾಕ್ಷ್ಯವನ್ನು ಹೊರತು ಪಡಿಸಿ ಪರಿಣಿತ ಅಭಿಯಂತರರು ವರದಿ ಅಥವಾ ರಸ್ತೆ ಗುಣಮಟ್ಟ ಕಾಮಗಾರಿ ಪರೀಕ್ಷಾ ವರದಿ (ಕ್ವಾಲಿಟಿ ಕಂಟ್ರೋಲ್ ರಿಪೋರ್ಟ್) ಸಾಕ್ಷ್ಯದಲ್ಲಿ ಕಂಡು ಬರುತ್ತಿಲ್ಲ. ಪ್ರಾ.ಸ-1 ಇವರ ನಿ.ಪಿ-1 ರಲ್ಲಿ ಮಾಡಿದ ಅವಿಚಾರವಾದ ಅಥವಾ ಸುಮಾರಾಗಿ ಆಧಾರ ರಹಿತ ದಾಖಲೆಗಳಿಲ್ಲದ ಆರೋಪಗಳನ್ನು ಗಣನೆಗೆ ತೆಗೆದುಕೊಳ್ಳುವುದು ಸೂಕ್ತವಲ್ಲವೆಂದು ನಿರ್ಧಾರಕ್ಕೆ ಬರಲಾಗಿದೆ.

32. ಸಂಕ್ಷಿಪ್ತವಾಗಿ ಪ್ರಶ್ನಾತೀತ ರಸ್ತೆ ಕಾಮಗಾರಿ ಲೋಕೋಪಯೊಗಿ ಇಲಾಖೆ ಸಿಂಧನೂರು ಮೂಲತಃವಾಗಿ 4.00ಕಿಮೀ ವರೆಗೆ ಮಂಜೂರಾಗಿದ್ದು ತದನಂತರ ಅಧೀಕ್ಷಕರು ಕಚೇರಿ ಲೋ.ಇ ಬಳ್ಳಾರಿ ಉಪವಿಭಾಗದಿಂದ 8.00 ಮತ್ತು 14.00 ಕಿಮೀ ವರೆಗೆ ವಿಸ್ತರಿಸಿದ್ದು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಯೋಜನೆಯನ್ನು ಸಂಪೂರ್ಣಗೊಳಿಸಿದ್ದು ಆಸನೌ ರವರು ಮೇಲಾಧಿಕಾರಿ ಲಿಖಿತ ಆದೇಶದಂತೆ ಕಾಮಗಾರಿ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು ಮೇಲ್ನೋಟಕ್ಕೆ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಅಲ್ಲದೇ ಅಭಿಯಂತರರ ವರದಿ ಲಭ್ಯವಿರದೇ ಇರುವುದನ್ನು ಮತ್ತು ಕಾಮಗಾರಿ ಗುಣಮಟ್ಟ ಪರೀಕ್ಷಾ ವರದಿ ಲಭ್ಯವಿರದೇ ಇರುವುದನ್ನು ಗಮನಕ್ಕೆ ತೆಗೆದುಕೊಂಡು ಆಸನೌ ರವರು ಪ್ರಾ.ಸ-1 ರವರು ಮಾಡಿದ ಆರೋಪಗಳಿಂದ ಕರ್ತವ್ಯ ಲೋಪ ಮತ್ತು ಲೌಕಿಕ ಅಧಿಕಾರಿಯಾಗಿ ಅಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು ಸಿಂಧನೂರು ವಿಭಾಗದ ಸಿರ್ಧಾರಕ್ಕೆ ಬರುವುದು ಸೂಕ್ತವಲ್ಲ ಎಂದು ನಿರ್ಣಯಿಸಲಾಗಿದೆ.

33. ಪ್ರಾ.ಸ-1 ರವರ ಆಧಾರ ರಹಿತ ಸಾಕ್ಷ್ಯ ಇವೆಲ್ಲಗಳನ್ನು ಗಮನಕ್ಕೆ ತೆಗೆದುಕೊಂಡಾಗ ಮಂಡನಾಧಿಕಾರಿಗಳು ಆಸನೌ ರವರ ಮೇಲಿನ ಆಪಾದನೆಗಳನ್ನು ಶಿಸ್ತು ಪ್ರಾಧಿಕಾರವು ಸಾಬೀತುಪಡಿಸುವಲ್ಲಿ ವಿಫಲವಾಗಿದೆ ಎಂದು ನಿರ್ಣಯಕ್ಕೆ ಬರುತ್ತಾ ಮೇಲಿನ ಅಂಶ-1 ನ್ನು ನಕರಾತ್ಮಕ ಎಂದು ಉತ್ತರಿಸಲಾಗಿದೆ.

30/9/2020

34. ಅಂಶ-2: **ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ**

:: ನಿರ್ಣಯ ::

35. ಆಸನೌ ಶ್ರೀ.ಜಿ.ನಾಗರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಹೊಸಪೇಟೆ, ಬಳ್ಳಾರಿ ಜಿಲ್ಲೆ) ಇವರ ಮೇಲೆ ಶ್ರೀ.ನಿರುಪಾದೆಪ್ಪ ತಂದೆ ಅಳದಪ್ಪ, ಬೊಮ್ಮನಾಳ ಇ.ಜೆ ಗ್ರಾಮ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ ರವರಿಂದ ಆಪಾದಿಸಲಾದ ಕರ್ತವ್ಯ ಲೋಪದ ಆರೋಪಗಳನ್ನು ಸಾಬೀತುಪಡಿಸಲು ಶಿಸ್ತು ಪ್ರಾಧಿಕಾರವು ವಿಫಲವಾಗಿದೆ ಎಂದು ನಿರ್ಣಯಿಸಲಾಗಿದೆ.

36. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರಿಗೆ ಮುಚ್ಚಿದ ಲಕೋಟೆಯಲ್ಲಿ ಗೌರವ ಪರಿಗಣನೆಗೆ ಸಲ್ಲಿಸಲು ಕಛೇರಿಗೆ ಆದೇಶಿಸಲಾಗಿದೆ.

30/9/2022

(ರಾಜಶೇಖರ.ವಿ.ಪಾಟೀಲ)

ಅಪರ ನಿಬಂಧಕರು ವಿಚಾರಣೆಗಳು-8,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

### 1. LIST OF WITNESSES EXAMINED ON BEHALF OF DISCIPLINARY AUTHORITY:

| | |
|---|---|
| PW1 | Sri Nirupadappa, Bommanala.E.J., Raichur District. |

30/9/2022

## 2. LIST OF WITNESSES EXAMINED ON BEHALF OF DELINQUENT GOVERNMENT OFFICIALS:

| | |
|---|---|
| Ex.P1 | FORM NO.I (Complaint) |
| Ex.P2 | FORM NO.II (Complainant's Affidavit) |
| Ex.P3 | Copy of Sindhanur to Bappur road Work Details. |
| Ex.P4 | Work Estimate Details of Assistant Executive Engineer, PWD, Sub division, Sindhanoor with enclosures |
| Ex.P5 | Photos |
| Ex.P6 | Letter of Nirupadeppa, Advocate, Sindhanuru dated:07.08.2015 with enclosures |

## 3. DEPOSITION OF DELINQUENT GOVERNMENT OFFICIAL

| | |
|---|---|
| DW1 | Sri.G.Nagaraj, Rtd Assistant Executive Engineer., Ballary District. |

## 4. LIST OF DOCUMENTS MARKED ON BEHALF OF DELINQUENT GOVERNMENT OFFICIAL

| | |
|---|---|
| Ex.D1 | I.O. Investigation report |
| | List of Documents |
| Ex.D2 | Letter of A.C., Lingasuru dated 25.10.2014 |
| Ex.D3 | Letter of A.C., Lingasuru dated 17-12-2014 |
| Ex.D4 | Photos |
| Ex.D5 | Copy of Road Bar Chart as per original sanctioned estimate |
| Ex.D6 | Attested copy of Transfer certificate |
| Ex.D7 | Attested copy of Transfer certificate |

30/9/...

(RAJASHEKAR.V.PATIL)
Additional Registrar Enquiries-8
Karnataka Lokayukta,
Bengaluru.

**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/479/2016/ARE-8

Multi Storied Building,
Dr. B.R. Ambedkar Veedhi,
Bengaluru-560001
Date: 06th October, 2022.

# RECOMMENDATION

Sub: Departmental Inquiry against Shri G.Nagaraj, the then Assistant Executive Engineer, PWD Department, Sindhanur, Raichur District (now working as Assistant Executive Engineer, Rural Drinking Water and Sanitation Sub-Division, Hospet, Bellary District)-reg.,

Ref: 1) Government Order No.ಲೋಇ 258 ಸೇಇವಿ 2016, Bengaluru, dated: 05/10/2016.

2) Nomination Order No.UPLOK-1/DE/479/2016, Bengaluru, dated: 17/10/2016 of Upalokayukta, State of Karnataka, Bengaluru.

3) Inquiry Report dated: 30/09/2022 of Additional Registrar of Enquiries-8, Karnataka Lokayukta, Bengaluru.

*****

The Government by its order dated: 05/10/2016 initiated the disciplinary proceedings against Shri G.Nagaraj, the then Assistant Executive Engineer, PWD Department, Sindhanur, Raichur District (now working as Assistant Executive Engineer, Rural Drinking Water and Sanitation Sub-Division, Hospet,

Bellary District) (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/479/2016, Bengaluru, dated: 17/10/2016 nominated Additional Registrar of Enquiries-8, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The DGO, Shri G.Nagaraj, the then Assistant Executive Engineer, PWD Department, Sindhanur, Raichur District (now working as Assistant Executive Engineer, Rural Drinking Water and Sanitation Sub-Division, Hospet, Bellary District) was tried for the following charges:

<u>ಅನುಬಂಧ–1</u>

<u>ದೋಷಾರೋಪಣೆ–1</u>

ಶ್ರೀ.ಜಿ.ನಾಗರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಸಿಂಧನೂರು – ಆಪಾದಿತ ಸರ್ಕಾರಿ ನೌಕರರು ಆದ ನೀವು ಸಿಂಧನೂರು ಲೋಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸಿಂಧನೂರಿನಿಂದ ಬಪ್ಪೂರವರೆಗೆ 0.00 ಕಿ.ಮೀ. ನಿಂದ 8.00 ಕಿ.ಮೀ.ವರೆಗೆ ಮತ್ತು 8.00 ಕಿ.ಮಿ ನಿಂದ 20.00 ಕಿ.ಮಿ.ವರೆಗಿನ ರಸ್ತೆಯನ್ನು 5054 ORF Appendix E New Works 2011–12ನೇ ಸಾಲಿನಲ್ಲಿ ಮಾಡಿದ್ದು, ಕಳಪೆ ಕಾಮಗಾರಿ ಮಾಡಿ ಕರ್ತವ್ಯಲೋಪವೆಸಗಿರುತ್ತೀರಿ. ಆದಕಾರಣ ಸರ್ಕಾರಿ ಆಪಾದಿತ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ನೀವು ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966ರ (3)(1)(ii) ಮತ್ತು (iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

4. The Inquiry Officer (Additional Registrar of Enquiries-8) on proper appreciation of oral and documentary evidence has held that, the Disciplinary Authority has **'Not Proved'** the charges leveled against the DGO, Shri G.Nagaraj, the then Assistant Executive Engineer, PWD Department, Sindhanur, Raichur District (now working as Assistant Executive Engineer, Rural Drinking Water and Sanitation Sub-Division, Hospet, Bellary District).

5. On perusal of the Inquiry Report, in order to prove the guilt of the DGO, the Disciplinary Authority has examined one witness i.e., PW-1 and Ex. P-1 to P-6 documents were got marked. DGO has examined himself as DW-1 and Ex. D-1 to D-7 documents were got marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and to exonerate DGO, Shri G.Nagaraj, the then Assistant Executive Engineer, PWD Department, Sindhanur, Raichur District (now working as Assistant Executive Engineer, Rural Drinking Water and

Sanitation Sub-Division, Hospet, Bellary District) of the charges leveled against him.

7. Action taken in the matter shall be intimated to this Authority.

Connected records are enclosed herewith.

Sd/- 6/10/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.